**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.**

ದಿನಾಂಕಃ 29 ನೇ ಡಿಸೆಂಬರ ತಿಂಗಳು 2025 ರಂದು

**ಸಿಸಿ ನಂ.369/2025**

ಫಿರ್ಯಾದುದಾರಃ ನಾಗೇಶ ಕೆ.ಟಿ

ವಿರುದ್ಧ

ಆರೋಪಿಃ ರಾಜು ತಂದೆ ಬಸವಣ್ಣೆಪ್ಪ ಓಲೇಕಾರ

## ಆರೋಪಣೆ

ಶ್ರೀ ಅಮೋಲ ಜಯಕುಮಾರ ಹಿರಿಕುಡೆ, ಪ್ರಭಾರ **1** ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹಾನಗಲ್ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಆರೋಪಣೆ ಹೊರಿಸುವುದೆನೆಂದರೆಃ

ಆರೋಪಿಯಾದ ನೀವು ಹಾಗೂ ದೂರುದಾರ ಸ್ನೇಹಿತರಾಗಿದ್ದು ನೀವು ದಿನಾಂಕಃ **06.06.2024** ರಂದು ದೂರುದಾರನಿಂದ ನಿಮ್ಮ ಮನೆಯ ಅಡಚಣೆಗಾಗಿ ಹಾಗೂ ತುರ್ತಾಗಿ ಹಣದ ಅವಶ್ಯಕತೆ ಇದೆ ಎಂಬ ಕಾರಣ ಮುಂದಿಟ್ಟುಕೊಂಡು ದೂರುದಾರನಿಂದ ರೂ**.1,80,000/-**ರ ಹಣವನ್ನು ಕೈಗಡ ಸಾಲ ಎಂದು ಪಡೆದು ಒಂದು ತಿಂಗಳ ಒಳಗಾಗಿ ಮರುಪಾವತಿಸುತ್ತೇನೆಂದು ಹೇಳಿರುತ್ತೀರಿ ಎಂತಲೂ ಹಾಗೂ ಸದರಿ ಹಣದ ಮರುಪಾವತಿ ಬಾಬತ್ತು ನೀವು ದಿನಾಂಕಃ **02.12.2024** ರಂದು ನಿಮ್ಮ ಬಾಬ್ತು **IDFC First Bank Branch Shiggaon** ಗೆ ಸಂಬಂಧಿಸಿದ ಚೆಕ್ ಸಂಖ್ಯೆ **000012** ನೇದ್ದನ್ನು ರೂ**.1,80,000/-** ದಿನಾಂಕಃ **02.12.2024** ಎಂದು ನಮೂದಿಸಿ ನೀವು ಸದರಿ ಚೆಕ್ಕನ್ನು ದೂರುದಾರನಿಗೆ ನೀಡಿರುತ್ತೀರಿ**.** ಸದರಿ ಚೆಕ್ಕನ್ನು ದೂರುದಾರರು ತಮ್ಮ ಖಾತೆವುಳ್ಳ ಬ್ಯಾಂಕ್ ಅಂದರೆ **IDFC First Bank Branch Shiggaon** ಮುಖಾಂತರ ನಗದಿಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ದಿಃ **07.12.2024** ರಂದು **Funds Insufficient** ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಅಮಾನ್ಯ ಮಾಡಿ

ಕಳುಹಿಸಿರುತ್ತಾರೆ. ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮಗೆ ದೂರುದಾರ ಪರ ವಕೀಲರು ದಿಃ **19.12.2024** ರಂದು ನೊಂದಾಯಿತ ಅಂಚೆ ಮೂಲಕ ನೋಟಿಸನ್ನು ನೀಡಿದ್ದು ಸದರಿ ನೋಟಿಸನ್ನು ನೀವು ಉದ್ದೇಶಪೂರ್ವಕವಾಗಿ ಸ್ವೀಕರಿಸದೇ ಇದ್ದದ್ದರಿಂದ ಅದು **unclaimed returned to sender** ಆಗಿ ಬಂದಿದ್ದು ಆದರೂ ಸಹ ನೀವು ಸದರಿ ದೂರುದಾರನ ಸಾಲದ ಹಣವನ್ನು ಮರಳಿ ನೀಡುವುದಾಗಲಿ ನಿಗದಿತ ಸಮಯದಲ್ಲಿ ಮಾಡಿಲ್ಲ. ಆದ್ದರಿಂದ ನೀವು ನೇಗೋಷಿಯೇಬಲ ಇನ್ಸ್ಟ್ರುಮೆಂಟ ಕಾಯ್ದೆ ಕಲಂ.**138** ನೇದ್ದರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಅಪರಾಧ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸ್ಥಳಃ ಹಾನಗಲ್ (ಶ್ರೀ ಅಮೊಲ ಜಯಕುಮಾರ ಹಿರಿಕುಡೆ,)

ದಿನಾಂಕಃ 29.12.2025 C/C 1 ನೇ ಹೆಚ್ಚುವರಿ ಹಿರಿಯ ಹಾಗೂ ಪ್ರಥಮ ದರ್ಜೆಯ

ನ್ಯಾಯಿಕ ದಂಡಾಧಿಕಾರಿಗಳು

ಹಾನಗಲ್.